ಜನಪದ ಸಾಹಿತ್ಯ ಕ್ರಿಯಾತ್ಮಕ ನೆಲೆಯಲ್ಲಿ ಹುಟ್ಟಿಕೊಂಡಿದೆ. ತಾವು ಮಾಡುವ ಕ್ರಿಯೆಗೆ ಅಭಿವ್ಯಕ್ತಿಯ ಮಾಧ್ಯಮವಾಗಿ ಮೂಡಿಬಂದ ಜನಪದರ ಆಚರಣೆಗಳು ತುಂಬಾ ವಿಶಿಷ್ಟವಾಗಿವೆ. ಅಂಥ ಇನ್ನೂರು ವಿಶಿಷ್ಟ ಆಚರಣೆಗಳನ್ನು ನಿರೂಪಿಸಿರುವ ಕೃತಿ "ಕರ್ನಾಟಕದ ಜನಪದ ಆಚರಣೆಗಳು".

ಕರ್ನಾಟಕದ ಎಲ್ಲ ಭಾಗಗಳ ಆಚರಣೆಗಳನ್ನು ದಾಖಲಿಸಿರುವ ಈ ಕೃತಿ ಕರ್ನಾಟಕದ ಜನರ ಬದುಕಿನ ಸಾಂಸ್ಕೃತಿಕ ಚಹರೆಗಳನ್ನು ವಿಭಿನ್ನ ನೆಲೆಯಲ್ಲಿ ವಿಸ್ತರಿಸಿರುವ ಪ್ರಯತ್ನವಾಗಿದೆ. ಇಲ್ಲಿಯ ಆಚರಣೆಗಳ ವಿಶೇಷತೆಯೆಂದರೆ ತನ್ನ ಸುತ್ತಲಿನ ಪ್ರಾಕೃತಿಕ ಚರಾಚರ ಜೀವರಾಶಿಗಳೊಂದಿಗೆ ಮಾನವ ಬೆಸೆದುಕೊಂಡಿರುವ ಮನುಷ್ಯ ಸಂಬಂಧಗಳನ್ನು ಪ್ರತಿಪಾದಿಸುವುದಾಗಿದೆ. ಕ್ಷೇತ್ರಕಾರ್ಯ ಆಧಾರಿತ ಈ ಕೃತಿಯನ್ನು ಕನ್ನಡ ವಿಶ್ವವಿದ್ಯಾಲಯದ ಓದುಗರ ಬಹುಬೇಡಿಕೆಯ ಕಾರಣವಾಗಿ ಮರುಮುದ್ರಣ ಮಾಡಲಾಗುತ್ತಿದೆ. ಈ ಕೃತಿಯನ್ನು ಕನ್ನಡ ವಿದ್ವತ್‌ಲೋಕ ಅತ್ಯಂತ ಪ್ರೀತಿಯಿಂದ ಬರಮಾಡಿಕೊಳ್ಳುತ್ತದೆಂದು ಭಾವಿಸುತ್ತೇನೆ.

ಡಾ. ಸ.ಚಿ. ರಮೇಶ
ಕುಲಪತಿ